## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 206/2015 ಸಿಡಬ್ಲೂ: 6 ಪಿಡಬ್ಲೂ: 3

ಪ್ರಮಾಣವಚನ ಬೋಧಿಸಲಾಯಿತು ದಿಃ 29-01-2026

ಹೆಸರು : ಹಾಸರೆಡ್ಡಿ

ತಂದೆ ಹೆಸರು : ತಮ್ಮಪ್ಪ ಮನ್ನೆ

ವಯಸ್ಸು : 71 ವರ್ಷ

ಉದ್ಯೋಗ : ನಿವೃತ್ತ ನೌಕರರು

ವಾಸಸ್ಥಳ : ಆಡಕಿ ತಾ.ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 1, 4 ಮತ್ತು 5 ರವರು ನನಗೆ ಪರಿಚಯ ಇಲ್ಲ. ಚಾ ಸಾ 7 ಗೊತ್ತು. ಆರೋಪಿತರು ನಮ್ಮ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿರ ಬಹುದು ಆದರೆ ನನಗೆ ಅಷ್ಟು ನೆನಪು ಇರುವುದಿಲ್ಲ. ಯಾರೋ ಇಬ್ಬರು ಜನ ನಮ್ಮ ಸಂಸ್ದೆ ಗೆ ಬಂದು ನಿಮ್ಮ ವಿದ್ಯಾರ್ಥಿಗಳು ಬಸ್ಸು ಪಾಸು ಸಲುವಾಗಿ ಬೇರೆ ಫಾರಂ ಸಲ್ಲಿಸಿದ್ದಾರೆ ಅಂತಾ ಹೇಳಿ ಹೋಗಿದ್ದರು. ನನ್ನ ಹತ್ತಿರ ಬಂದು ಯಾವುದೇ ಪರಿಶೀಲನೆ ಮಾಡಿಲ್ಲ. ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರ ಬಹುದು ನನಗೆ ನೆನಪಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿ.06-11-2014 ರಂದು ನಾನು ನನ್ನ ಕಾಲೇಜಿನಲ್ಲಿ ಕರ್ತವ್ಯದಲ್ಲಿ ಚಾ ಸಾ 1, 4 ಮತ್ತು 5 ರವರ ಮೂರು ಜನರು ಬಂದು ಬಸ್ಸು ಪಾಸು ವಿಷಯದಲ್ಲಿ ಧೃಢಿಕರಿಸಿದ ಮೂರು ಜನ ವಿದ್ಯಾರ್ಥಿಗಳ ರಶೀಯನ್ನು ಹಾಜರು ಪಡಿಸಿದರು ಎಂದರೆ ಸರಿ. ಆಗ 1 ರಿಂದ 3 ನೇ ಆರೋಪಿತರು ಕಟ್ಟಿದ ರಶೀದಿಗಳನ್ನು ಪರಿಶೀಲಿಸಿದಾಗ ಸದರಿಯವರಿಬ್ಬರು ತಮ್ಮದೇ ಹಳೆಯ ರಶೀದಿಯ ಮೇಲೆ ದಿನಾಂಕವನ್ನು ತಿದ್ದಿ ಜೆರಾಕ್ಸ ಮಾಡಿಸಿ ಅದರ ಮೇಲೆ ನನಿಂದ ಧೃಢಿಕರಿಸಿಕೊಂಡು ಹೋಗಿದ್ದು ಕಂಡು ಬಂರುತ್ತದೆ ಎಂದರೆ ನೆನಪಿಲ್ಲ. 1 ನೇ ಆರೋಪಿತನು ಪ್ರಶಾಂತ ಕುಮಾರ್ ತಂದೆ ಚನ್ನ ಬಸಪ್ಪ ಇವರ ಹೆಸರಿನ ರಶೀದಿಯ ಮೇಲೆ ಹೆಸರು ಮತ್ತು ದಿನಾಂಕವನ್ನು ತಿದ್ದು ಪಡಿ ಮಾಡಿ ಜೆರಾಕ್ಸ ಮಾಡಿಸಿ ನನಿಂದ ಧೃಢಿಕರಿಸಿಕೊಂಡು ಹೋಗಿ ಸರ್ಕಾರಕ್ಕೆ ಮೋಸ ಹಾಗೂ ವಂಚನೆ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ಓದಿ

ಹೇಳಲಾಗಿ ಸದರಿ ದಾಖಲಾತಿಯ ಸಾಕ್ಷಿಯ ಹೇಳಿಕೆಯಾಗಿದ್ದು ಸಾಕ್ಷಿಯ ಅದರಲ್ಲಿರುವ ವಿಷಯಗಳನ್ನು ನಿರಾಕರಿಸಿರುತ್ತಾರೆ. ಸದರಿ ನಿರಾಕರಿಸಿದ ಭಾಗವನಲ್ಲು ನಿ ಪಿ 15 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎ ಎಂ ವಕೀಲರಿಂದ:

ಪಾಟಿ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂಃ 206/2015 ಸಿಡಬ್ಲೂ: 7 ಪಿಡಬ್ಲೂ: 4

ಪ್ರಮಾಣವಚನ ಬೋಧಿಸಲಾಯಿತು ದಿಃ 29-01-2026

ಹೆಸರು : ಮೊಹನ್ ಬಾಬು

ತಂದೆ ಹೆಸರು : ರಮರೆಡ್ಡಿ

ವಯಸ್ಸು : 73 ವರ್ಷ

ಉದ್ಯೋಗ : ನಿವೃತ್ತ ನೌಕರರು

ವಾಸಸ್ಥಳ : ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 1, 4 ಮತ್ತು 5 ರವರು ನನಗೆ ಪರಿಚಯ ಇಲ್ಲ. ಚಾ ಸಾ 6 ಗೊತ್ತು. ಚಾ ಸಾ 1, 4 ಮತ್ತು 5 ನಮ್ಮ ಸಂಸ್ಥೆಯಲ್ಲಿ ಬಂದು ವಿಚಾರಣೆ ಮಾಡಿಲ್ಲ. ಪೋಲೀಸರಿಗೆ ಹೇಳಿಕೆಯನ್ನು ನೀಡಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಪೊಲೀಸರು ನನಿಂದ ಮೂರು ರಶೀದಿಗಳನ್ನು ವಶಪಡಿಸಿಕೊಂಡಿರುತ್ತಾರೆ. ಆದರೆ ಅದು ಯಾವುದು ಎಂದು ಈಗ ಹೇಳಲು ಬರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ವಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿ.09-04-2015 ರಂದು ನಾನು ನನ್ನ ಕಾಲೇಜಿನಲ್ಲಿ ಕರ್ತವ್ಯದಲ್ಲಿ ಚಾ ಸಾ 8 ರವರು ಬಂದು 1 ರಿಂದ 3 ನೇ ಆರೋಪಿತರ ಕಾಲೇಜು ರಶೀದಿ ಪುಸ್ತಕ ನೀಡುವಂತೆ ಹೇಳಿದ್ದು ಅದಕ್ಕೆ ನಾನು ರಶೀದಿ ಪುಸ್ತಕವನ್ನು ಪರಿಶಿಲಿಸಿ 2014 ಮತ್ತು 2015 ನೇ ಸಾಲಿನಲ್ಲಿಯೇ ರಶೀದಿ ಕ್ರಮ ಸಂಖ್ಯೆ 701 ರಿಂದ 800 ರಶೀದಿ ಪುಸ್ತಕವನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿ. ಕ್ರ ಮ ಸಂಖ್ಯೆ 778 ನೇದ್ದ ಪ್ರಶಾಂತ ಕುಮಾರ್ ತಂದೆ ಚನ್ನಬಸಪ್ಪ ಈತನ ಹೆಸರಿನಲ್ಲಿ ದ್ದು ಆದರೆ ತನ್ನ ಹೆಸರನ್ನು ನಮೂದು ಮಾಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಇನೂಬ್ಬ ವಿದ್ಯಾರ್ಥಿಯಾದ ಹನುಮಂತ ತಂದೆ ಈರಣ್ಣ ಈತನ ಕ್ರ ಮ ಸಂಖ್ಯೆ 5401 ರಿಂದ 5600 ವರೆಗೆ ಇದ್ದು ಸದರಿ ಪುಸ್ತಕದಲ್ಲಿ ರಶೀದಿ ಕ್ರಮ ಸಂಖ್ಯೆ 5551 ನೇದ್ದು ಆತರ ಹೆಸರಿನಿಂದಲೇ 2016 ನಲ್ಲಿಯೇ ರಶೀದಿ ಇತ್ತು ಎಂದರೆ ನೆನಪಿಲ್ಲ. ಸದರಿ ರಶೀದಿಯಲ್ಲಿ ದಿನಾಂಕ ಮತ್ತು

ಹೆಸರನ್ನು ತಿದ್ದುಪಡಿ ಮಾಡಿದೆವು ಎಂದರೆ ನೆನಪಿಲ್ಲ. ಅದೇ ರೀತಿ 3 ನೇ ಆರೋಪಿತನು ಹುಸೇನಪ್ಪ ತಂದೆ ತಿಪ್ಪಣ್ಣ ಈತನ ರಶೀದಿಯನ್ನು ಕ್ರಮ ಸಂಖ್ಯೆ 5001 ರಿಂದ 5200 ಪುಸ್ತಕದಲ್ಲಿ ಚಕ್ಕು ಮಾಡಲಾ ಗಿ ರಶೀದಿ ಕ್ರಮ ಸಂಖ್ಯೆ 5084 ಇತ್ತು. ಆತನ ಹೆಸರಿನಿಂದಲೇ 2013-2014 ಸಾಲಿನಲ್ಲಿಯೇ ರಶೀದಿ ಇರುತ್ತದೆ. ಆದರೆ ಆತನು ಸಲ್ಲಿಸಿದ ಜೆರಾಕ್ಸ ರಶೀದಿಯಲ್ಲಿ ದಿ. ಬದಲಾವಣೆ ಮಾಡಿದ್ದು ಕಂಡು ಬಂದಿತ್ತು ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ಓದಿ ಹೇಳಲಾಗಿ ಸದರಿ ದಾಖಲಾತಿಯ ಸಾಕ್ಷಿಯ ಹೇಳಿಕೆಯಾಗಿದ್ದು ಸಾಕ್ಷಿಯ ಅದರಲ್ಲಿರುವ ವಿಷಯಗಳನ್ನು ನಿರಾಕರಿಸಿರುತ್ತಾರೆ. ಸದರಿ ನಿರಾಕರಿಸಿದ ಭಾಗವನಲ್ಲು ನಿ ಪಿ 16 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಷಯಗಳು ಗೊತ್ತಿದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನ ಎಂದರೆ ಸರಿಯಿಲ್ಲ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎ ಎಂ ವಕೀಲರಿಂದ:

ಪಾಟಿ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**